ಎಂದು ಕಾರಲ್ಲಿ ಕುಂತಗಂಡು ಏಸಿ ಹಾಕ್ಕಂಡ. ಕಾರು ನಿಧಾನಕ್ಕೆ ಚಲಿಸಿತು. 'ಆ ಇಂಜಿನಿಯರ್ ಊಟದ ಹೊತ್ತಿಗೆ ಬರೋದು. ಅವನ್ನೀಟು ಮಾತಾಡಿಸಿ ಮನಿಗೆ ಹೋಗಮು. ಇವತ್ತು ನಮ್ಮ ಜೊತಿಗೆ ಊಟ ಮಾಡುವಂತಿ. ನಿನ ತಂಗಿನ್ನ ಸಂಜೆ ಕರೆದುಕೊಂಡು ಬಾ ನೋಡಮು. ಯಾವ ಕೆಲಸ ಆದೀತು ಯೋಚಿಸಮು. ಆಕಿಗೊಂದು ಭದ್ರ ಮಾಡಮು' ನಿಧಾನಕ್ಕ ಹೋತಿದ್ದ ಕಾರು ಗಕ್ಕನ ನಿಂತಿತು.

'ಏನಾತಲೇ ಇಂಗ್ಯಾಕ ಗಕ್ಕನ ನಿಲ್ಲಿಸಿದಿ?'

'ಅಲ್ಲಿ ನೋಡಪ್ರೋ ಮಾರಾಯನ ತೋಳ ಕುರಿನ್ನ ಹಿಡಕಂಡು ಹೋಗುತ್ಯೆತಿ. ಪಾಪ ಬಿಸಿಲಾ ಮಕ್ಕಂಡಿದ್ದುವನು. ಕಾಯಿಕೊಂಡಿದ್ದ ತೋಳಗಳು ಇದೇ ವ್ಯಾಳ್ಯಾದಗ ಗಪ್ಪನ್ನ ಹಿಡಕಂಡು ಹೊಂಟಾದ ನೋಡ್ರಿ' ಎಂದು ಡ್ರೈವರ್ ಭಯದಿಂದ ತೋರಿಸಿದ. ಅಮರೇಶಗ ಸಿಟ್ಟು ಬಂತು. 'ಇವನೌನ ಯಾರಿಲ್ಲದ್ದು ನೋಡಿ ಬಂದಾದ. ಕಲ್ಲು ಒಗದು ಕುರಿನ್ನ ಬಿಡುಸ್ತಿನಿ ಕಾರು ನಿಲ್ಲಿಸು' ಎಂದು ಇಳಿಯಲು ಅವಸರ ಮಾಡಿದ. 'ಲೇ ಹುಚ್ಚಾ ಕುರಿ ಸತ್ತೋಗಿರುತದ. ಅದನೇನು ಬಿಡುಸುತ್ತಿದ್ದಿ. ಕುರಿಗಳನ್ನ ತೋಳ ತಿಂತಾವ ಅದರಾಗೇನು. ನೀನು ಕೊಯ್ಕಂಡು ತಿನ್ನಾದಿಲ್ಲನು. ಅದರ ಮ್ಯಾಲ್ಯಾಕ ಸಿಟ್ಟಗೇರುತ್ತಿ' ಎಂದು ಏನು ಸಣ್ಣ ಆಶ್ಚರ್ಯವನ್ನು ಸೂಚಿಸದೆ ತಣ್ಣಗೆ ಬಾದಾಮಿಯನ್ನು ಬಾಯಾಡಿಸುತ್ತಿದ್ದರು. ಅಮರೇಶನಿಗೆ ಏನೋ ಒಂದು ತರ ಕಸಿವಿಸಿ ಆಯಿತು. ಅಂತ ರವರವ ಬಿಸಿಲಿನಲ್ಲಿ ತೋಳದ ಬಾಯಿಂದ ರಕ್ತ ತೊಟ್ಟಿಕ್ಕುತ್ತಿತ್ತು. ತೋಳದ ಕಣ್ಣುಗಳು ಬಿಸಿಲಿಗೆ ಹೊಳೆಯುತ್ತಿದ್ದವು. ಇವನನ್ನೇ ಅಟ್ಟಿಸಿಕೊಂಡು ಬಂದಂತೆ ಅನಿಸಿತು. ತೋಳದ ಮುಖದಲ್ಲಿ ದುರುಗಪ್ಪ ಸಾಹುಕಾರರ ಮುಖ ಕಂಡಿತು. ತೋಳದ ಮುಖದಲ್ಲಿ ತಂಗಿಯ ಮುಖ ಕಂಡಂತಾಗಿ ಕ್ಷಣ ಬೆಚ್ಚಿದ. ದುರುಗಪ್ಪನ ಮುಖ ನೋಡಿದ. ಪ್ರಶಾಂತವಾಗಿ ಮುಖದಲ್ಲಿ ಮುಗುಳು ನಗೆ ತುಂಬಿಕೊಂಡು ಕಣ್ಣು ಮುಚ್ಚಿದ್ದ. ಆ ಮುಖದಲ್ಲಿ ತೋಳ ಕುಣಿಯುತ್ತಿರುವಂತೆ ಅನಿಸಿತು. ಗೌಡರು ಕೈಯಲ್ಲೊಂದು ಕೆಬ್ಬಣದ ಭರ್ಚಿ ಹಿಡಕಂಡು 'ಹೀಗೆ ಕುಣಿ... ಹೀಗೆ ಕುಣಿ' ಎಂದು ತರಬೇತಿ ನೀಡುತ್ತಿದ್ದರು. 'ಅಣ್ಣಾ... ಅಣ್ಣಾ...' ಎಂದು ತಂಗಿ ಕೂಗಿದಂತಾಯಿತು. ಅಮರೇಶ ಕುಳಿತಲ್ಲೇ ಜಲ ಜಲ ಬೆವತ. 'ಆ ಕುರಿ ತೋಳ ನೋಡಿ ನನಗ ಒಂದು ತರ ಆಗತೈತಿ ಕಾರು ನಿಲ್ಲಿಸಪ್ರೋ' ಎಂದು ಚಿಟ್ಟನ ಚೀರಿದ. ಬೆಚ್ಚಿಬಿದ್ದ ಡ್ರೈವರ್ ಕಾರು ಸೈಡಿಗೆ ನಿಲ್ಲಿಸಿದ. ದಡಕ್ಕನ ಎದ್ದ ದುರುಗಪ್ಪ ಸಾಹುಕಾರ 'ಏನಾಯಿತಲೇ ಅಂಗ್ಯಾಕ ಪ್ರಾಣ ಹೋಗಂಗ ಚೀರುತ್ತಿ. ಈ ಮಟ ಮಟ ಮಧ್ಯಾಹ್ನದಾಗ ದೆವ್ವ ಏನಾರ ಹಿಡಕಂತನು' ಎಂದು ಕಾರಿನಿಂದ ಇಳಿದರು. ಒಂದು ಕಡೆ ಮೂತ್ರ ಮಾಡಿ ಬಂದ. 'ಒಂದು ಎಳೆ ನೀರು ಕುಡೆಲೆ ಸರಿ ಹೋತದ. ಈ ಬಿಸಿಲಿಗೆ ತಲೆ ತಿರುಗುತ್ತಿರಬೇಕು' ಎಂದು ಡ್ರೈವರ್‌ಗೆ ಹೇಳಿದ. 'ಏನು ಇಲ್ಲಪ್ರೋ ನೀವು ನಡಿರಿ. ನಾನು ಮನಿಗೆ ಹೋತೀನಿ. ನನಗ್ಯಾಕೊ ಹೊಟ್ಯಾಗ ತಳಮಳ ಆಗಾಕತ್ತಾಯತಿ' ಮುಖ ಸಣ್ಣದು ಮಾಡಿಕೊಂಡು ನಿಂತುಗಂಡ.

'ಆ ತೋಳನ್ನ ನೋಡಿ ಅಂಜಿಕಂಡಿ ಏನಲೆ. ಅದರ ಧರ್ಮ ಅದು ಮಾಡ್ಯೆತಿ. ಯಾಕ ಹೆದರುತ್ತಲೇ' 'ಅದೇನೋ ಸರೆಪಾ. ಆದರ ಮನುಷ್ಯರೇ ತೋಳಗಳಾದರ ಏನು ಮಾಡಬೇಕು?'

'ಅದೆಂಗ ಆತಾದಲೆ ನಿನಗೇನೋ ಭ್ರಮೆ. ನಡಿ ನಡಿ ಕಾರು ಹತ್ತು. ಮನಿಗೆ ಹೋದ ಮ್ಯಾಲ ಒಂದೀಸು ರೊಕ್ಕ ಕೊಡ್ತೀನಿ. ತಗಂಡು ಮನಿಗೆ ಹೋಗಿ ಮಕ್ಕಂಬುಡು. ಹುಲಿಗೆಮ್ಮ ತಾಯಿಗಿ ಬೇಡಿಕಂಡು ಕಾಯಿ ಒಡಿ. ಭಯ ಹೋತದ' ಸಮಾಧಾನ ಮಾಡಿದ.

ಕಿಚ್ಚು ತುಂಬಿದ ಬೂದಿಯಂತೆ ಮೌನವಾಗಿ ಕಾರಿನಲ್ಲಿ ಕುಳಿತ. ಯಾಕೋ ಕೈ ಕಾಲು ಬಿಗಿಯುತ್ತಿದ್ದವು. ಚಲಿಸುತ್ತಿರುವ ಕಾರು ಉಕ್ಕಿನ ಕೋಟೆಯಂತೆ ಕಂಡಿತು. ಉಸಿರು ಬಿಸಿಯಾಗುತ್ತಿತ್ತು. ರಕ್ತ ಕುದಿಯುತ್ತಿತ್ತು. ಸಿಟ್ಟು ನೆತ್ತಿಗೇರುತ್ತಿತ್ತು. 'ನೀನು ಆ ಸುಡುಗಾಡು ಮಂದಿ ಸಹವಾಸ ಮಾಡಬ್ಯಾಡ. ಚನ್ನಾಗಿ ಓದಿ ಒಳ್ಳೆ ನೌಕರಿ ಹಿಡಿ' ಅವ್ವ ಹೇಳಿದ ಮಾತು ನೆನಪಾದವು.

'ಏನಲೇ ಸುಮ್ಮನೆ ಗರ ಬಡಿದವರಂಗ ಕುಂತೆಲಲೆ. ಅಂಜಿಕಿ ಹೋಯಿತಿಲ್ಲ. ರಾಯಚೂರಿಗೆ ಹೋಗಿ ರಾತ್ರಿ ಒಳ್ಳೇ ಊಟ ಮಾಡಮು' ಎಂದು ಅಮರೇಶನ ಕಡೆ ನೋಡಿದರು. ಅವನ ಬಿಗಿದುಕೊಂಡ ಮುಖ ನೋಡಿ ಸುಮ್ಮನೆ ಮುಂದಿನ ದಾರಿ ನೋಡುತ್ತಾ ಕುಳಿತರು.

ದುರುಗಪ್ಪ ಸಾಹುಕಾರರ ಕಾಲದಲ್ಲಿಯೇ ಆದ ಡಬಲ್ ರಸ್ತೆ. ನೂರಾರು ಗಿಡಗಳನ್ನು ಕಡಿಸಿ ಈ ರಸ್ತೆಯನ್ನು ಮಾಡಿದ್ದರು. ಸಹಜವಾಗಿ ಬೆಳೆದಿದ್ದ ಮರಗಳನ್ನು ನಿರ್ದಯವಾಗಿ ಕತ್ತರಿಸಿ ಹಾಕಿದ್ದರು.